ದಿನಾಂಕ: 17-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲುಃ ಶ್ರೀ.ಬಿ.ಕೆ.ಜೆ. ಪ್ರತಿವಾದಿ 1 ರಿಂದ 3 ರವರ ಪರ ವಕೀಲರಿಂದಃ**

12. ತಳಕಟ್ನಾಳನಲ್ಲಿರುವ ಪ್ರತಿವಾದಿ 1 ರಿಂದ 3 ರವರಿಗೆ ಸಂಬಂಧಪಟ್ಟ ಹೊಲಗಳನ್ನು ನಮ್ಮ ಸೊಸೆ ವಾದಿಯನ್ನು ಕೊಡುವ ಸಮಯದಲ್ಲಿ ನಾನು ನೋಡಿದ್ದೇನೆ. ಸದರಿ ಹೊಲಗಳ ಸರ್ವೆ ನಂಬರ ಮತ್ತು ಚಕ್ಕಬಂದಿ ನನಗೆ ನೆನಪಿಲ್ಲ. ವಾದಿಯ ಮದುವೆಯಾದ ನಂತರ ಎರಡು ಬಾರಿ ಪ್ರತಿವಾದಿ 1 ರಿಂದ 3 ರವರ ಹೊಲಗಳಿಗೆ ಹೋಗಿರುತ್ತೇನೆ. ಸದರಿ ಹೊಲಗಳ ಉತಾರ ನಾನು ನೋಡಿದ್ದೇನೆ. ಸದರಿ ಹೊಲಗಳ ಉತಾರ ನಾಗೇಶ, ಶೈಲಜಾ ಮತ್ತು ವಾದಿಯ ಹೆಸರಿನಲ್ಲಿ ಇವೆ. ನಾಗೇಶ ಇವರು ಮೃತಪಟ್ಟ ನಂತರ ಸಹ ಒಂದು ಬಾರಿ ಹೊಲಗಳಿಗೆ ಹೋಗಿ ಬಂದಿರುತ್ತೇನೆ. ಆಗ ವಾದಿ ತಳಕಟ್ನಾಳನಲ್ಲಿ ಇದ್ದರು. ಈಗ ವಾದಿ ಸವದತ್ತಿಯಲ್ಲಿ ವಾಸ ಇದ್ದಾರೆ. ವಾದಿಯ ಆಧಾರ ಕಾರ್ಡ ಮತ್ತು ರೇಷನ ಕಾರ್ಡ ತಳಕಟ್ನಾಳ ವಿಳಾಸದ್ದು ಇವೆ. ವಾದಿ ಸದರಿ ಆಧಾರ ಕಾರ್ಡ ಮತ್ತು ರೇಷನ ಕಾರ್ಡನ್ನು ಹಾಜರ ಮಾಡಿರುತ್ತಾರೆ.

13. ಪ್ರತಿವಾದಿ 1 ರಿಂದ 3 ರವರ ಹೊಲಗಳ ಬಗ್ಗೆ ಆದ ಡಿಕ್ರೀಯನ್ನು ನಾನು ನಾಗೇಶ ಇವರ ಮರಣಾ ನಂತರ ನೋಡಿದ್ದೇನೆ. ನಾನು ನೋಡಿದ ಡಿಕ್ರೀಯ ನಂಬರ ಹೇಳಲು ಆಗುವುದಿಲ್ಲ. ನಾನು ಪ್ರತಿವಾದಿ 1 ರಿಂದ 3 ರವರ ಹೊಲಗಳಿಗೆ ಹೋಗಿದ್ದೆ, ಅವರ ಹೊಲಗಳ ಉತಾರ ನೋಡಿರುತ್ತೇನೆ ಹಾಗೂ

ಹೊಲಗಳ ಬಗ್ಗೆ ಡಿಕ್ರೀ ಪ್ರತಿಯನ್ನು ನೋಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

14. ವೆಂಕಟೇಶ್ವರ ಮಂಗಲ ಕಾರ್ಯಾಲಯ ಎಂದು ಗೋಕಾಕನಲ್ಲಿ ಇರುವುದಿಲ್ಲ ಹಾಗೂ ಅಲ್ಲಿ ಯಾವುದೇ ಲಗ್ನ ಆಗುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕ 24/05/2010 ರಂದು ಮದುವೆ ಸಮಯದಲ್ಲಿ ಬೀಗರನ್ನು ಬರಮಾಡಿಕೊಳ್ಳಲಾಗಿದೆ. ಬೀಗರನ್ನು ಬರಮಾಡಿಕೊಂಡ ಬಗ್ಗೆ ಬಾಯ ಹೇಳಿಕೆಯನ್ನು ಹೊರತುಪಡಿಸಿ ಬೇರೆ ಕಾಗದ ಪತ್ರ ಇರುವುದಿಲ್ಲ ಎಂದರೆ ಸರಿ. ಬೀಗರನ್ನು ಬರಮಾಡಿಕೊಂಡಾಗ ನಾವು ಒಂದು ಟ್ರ್ಯಾಕ್ಸ ವಾಹನದಲ್ಲಿ 15 ರಿಂದ 20 ಜನ ಬಂದಿದ್ದೆವು. ಸಾಮಾನ್ಯವಾಗಿ ಮದುವೆ ಸಮಯದಲ್ಲಿ ಹುಡುಗಿಯ ಕಡೆಯಿಂದ ಒಬ್ಬರು ಭಟ್ಟಜಿ ಬಂದಿರುತ್ತಾರೆ ಎಂದರೆ ಸರಿ. ಹುಡುಗಿಯ ಕಡೆಯಿಂದ ಯಾರೂ ಬಂದಿರಲಿಲ್ಲ.

15. ವರ ಪೂಜಾ ಆಗಬೇಕಾದಾಗ ಮದುವೆ ಯಾದಿ ಮಾಡುತ್ತಾರೆ ಎಂದರೆ ಸರಿ. ಮದುವೆ ಯಾದಿಯನ್ನು ವಾದಿ ಹಾಜರ ಮಾಡಿರುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಅಕ್ಷತೆ ಎಷ್ಟು ಗಂಟೆಗೆ ಬಿದ್ದಿರುತ್ತದೆ ಎಂದು ಬರೆಯಿಸಿಲ್ಲ ಎಂದರೆ ಸರಿ. ಮದುವೆ ಸಮಯದಲ್ಲಿ ಹೋಮ ಹವಣ ಇರುವುದಿಲ್ಲ ಎಂದರೆ ಸರಿಯಲ್ಲ. ಮದುವೆ ಸಮಯದಲ್ಲಿ ಮದುವೆ ಗಂಡು ಮತ್ತು ಮದುವೆ ಹುಡುಗಿಯನ್ನು ನಿಲ್ಲಿಸಿ ಮಧ್ಯದಲ್ಲಿ ಅಂತರಪಟ ಹಿಡಿದಿರುತ್ತಾರೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಮದುವೆ ಗಂಡು

ಮತ್ತು ಹೆಣ್ಣು ಅಕ್ಕ-ಪಕ್ಕ ನಿಂತಿದ್ದರು ಎಂದು ಬರೆಯಿಸಿದ್ದೇನೆ ಎಂದರೆ ಸರಿ. ಅಕ್ಷತೆ ಹಾಕಿದ ನಂತರ ಮಾಲೆ ಹಾಕುತ್ತಾರೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಮಾಲೆ ಹಾಕಿದ ನಂತರ ಅಕ್ಷತೆ ಹಾಕಲಾಗಿದೆ ಎಂದು ಬರೆಯಿಸಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಮೊದಲು ಹೋವ ಹವಣ ಆದ ನಂತರ ಅಕ್ಷತೆ ಹಾಕಲಾಗಿದೆ ಎಂದು ಬರೆಯಿಸಿದ್ದೇನೆ ಎಂದರೆ ಸರಿ.

16. ಅರ್ಚಕರಾದ ಕಿಶೋರ ಗುಡಿ ಇವರು ಮದುವೆ ಫೋಟೋ ತೆಗೆದಿರುತ್ತಾರೆ. ಮದುವೆ ಸಮಯದಲ್ಲಿ ನಮ್ಮ ಫೋಟೋ ಸಹ ತೆಗೆದಿರುತ್ತಾರೆ. ಫೋಟೋ ತೆಗೆದ ವ್ಯಕ್ತಿಯ ಹೆಸರು ನನಗೆ ಹೇಳಲು ಬರುವುದಿಲ್ಲ. ವಾದಿಗೆ ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲ ಪದ್ದತಿ ಮತ್ತು ರೀತಿಗಳ ಬಗ್ಗೆ ಮಾಹಿತಿ ಇರುತ್ತದೆ.

17. ಸಾಮಾನ್ಯವಾಗಿ ಎರಡು ಬಾರಿ ಅಕ್ಷತೆ ಹಾಕುತ್ತಾರೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಮೊದಲ ಅಕ್ಷತೆಯ ಬಗ್ಗೆ ಬರೆಯಿಸಿಲ್ಲ ಎಂದರೆ ಸರಿ. ಹುಡುಗನ ಕಡೆಯಿಂದ ಹೋಮ ಹವಣಕ್ಕೆ ಮತ್ತು ಪುನ್ಯಾವಾಚಕ್ಕೆ ಹುಡುಗನ ತಂದೆ ತಾಯಿ ಕುಳಿತಿದ್ದರು. ಹುಡುಗಿಯ ಕಡೆಯಿಂದ ವಾದಿಯ ಅಣ್ಣ ಕುಳಿತಿದ್ದರು. ಸುರ್ಗಿ ಕಾರ್ಯಕ್ರಮ ವೆಂಕಟೇಶ್ವರ ಮಂಗಲ ಕಾರ್ಯಾಲಯದಲ್ಲಿ ಆಗಿರುತ್ತದೆ, ಆ ಕಾರ್ಯಕ್ರಮದಲ್ಲಿ ವಾದಿಯ ಅಣ್ಣ ಮತ್ತು ಅವರ ಹೆಂಡತಿ, ನನ್ನ ಹೆಂಡತಿ, ಇನ್ನು 3 ಜನ ಕುಳಿತಿದ್ದರು, ನನಗೆ ಅವರ ಹೆಸರು

ನೆನಪಿಲ್ಲ. ಸುರ್ಗಿ ಕಾರ್ಯಕ್ರಮದ ಫೋಟೋ ತೆಗೆಯಲಾಗಿದೆ.

18. ಮದುವೆಯಾದ ದಿನವೇ ವಾದಿ ಬಾಳ್ವೆ ಮಾಡಲು ಅವರ ಗಂಡನ ಮನೆಗೆ ಹೋಗಿರುತ್ತಾರೆ. ಮದುವೆಯ ಪದ್ದತಿಗಳ ಬಗ್ಗೆ ಗಂಡಸರಿಗಿಂತ ಹೆಣ್ಣು ಮಕ್ಕಳಿಗೆ ಹೆಚ್ಚಿನ ಮಾಹಿತಿ ಇರುತ್ತದೆ ಎಂದರೆ ಸರಿ. ನನ್ನ ಹೆಂಡತಿಗೆ ಈ ದಾವೆಯಲ್ಲಿ ಸಾಕ್ಷಿ ನುಡಿಯಲು ಯಾವುದೇ ತೊಂದರೆ ಇರುವುದಿಲ್ಲ. ಮದುವೆಗಾಗಿ ಗಂಡನಿಗೆ ನಾವು ಬಟ್ಟೆ, ಬಂಗಾರ ಏನೂ ತಂದಿಲ್ಲ. ಮದುವೆಗೆ ಪಾತ್ರೆ ಸಾಮಾನುಗಳು ಸಹ ಖರೀದಿ ಮಾಡಿಲ್ಲ. ಹುಡುಗಿಯ ಬಟ್ಟೆ ಖರೀದಿ ಮಾಡದ ಬಗ್ಗೆ ರಸೀದಿಗಳು ಇರುವುದಿಲ್ಲ.

19. ವಾದಿ ಮತ್ತು ನಾಗೇಶ ಬೋಟೆ ಇವರ ಮದುವೆ ಆಗದೇ ಇದ್ದುದ್ದರಿಂದ ನಮ್ಮ ಬಳಿ ಯಾವುದೇ ಕಾಗದ ಪತ್ರಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಮದುವೆಗು ಹೋಗಿಲ್ಲ ಮತ್ತು ಯಾವುದೇ ಮದುವೆ ಆಗಿಲ್ಲ ಎಂದರೆ ಸರಿಯಲ್ಲ. ಯಾವ ಯಾವ ಪದ್ದತಿಯಲ್ಲಿ ಲಗ್ನ ಆಗುತ್ತದೆ ಎಂದು ನನಗೆ ಗೊತ್ತಿಲ್ಲದೇ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

20. ನಾಗೇಶ ಬೋಟೆ ಇವರು ಮಾನಸಿಕವಾಗಿ ಅಸ್ವಸ್ಥರಿದ್ದರು ಎಂದರೆ ಸರಿಯಲ್ಲ. ನಾಗೇಶ ಬೋಟೆ ಇವರಿಗೆ ಆರೋಗ್ಯ ಸರಿ ಇರಲಿಲ್ಲ, ಏನು ಆಗಿತ್ತು ಎಂದು ನನಗೆ ಗೊತ್ತಿಲ್ಲ. ನಾಗೇಶ ಇವರು ದಿಃ 28/06/2019 ರಂದು ಮೃತಪಟ್ಟಿರುತ್ತಾರೆ. ನಾನು ನಾಗೇಶ ಇವರು ಮೃತಪಟ್ಟ ನಂತರ ಮಾತನಾಡಿಸಲು

ಹೋದಾಗ ಅವರು ಮೃತಪಟ್ಟ ದಿನಾಂಕ ಗೊತ್ತಾಗಿರುತ್ತದೆ. ನಾಗೇಶ ಇವರಿಗೆ ಯಾವ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿತ್ತು ಮತ್ತು ಅವರಿಗೆ ಏನು ಕಾಯಿಲೆ ಇತ್ತು ಎಂದು ನನಗೆ ಗೊತ್ತಿಲ್ಲ. ನಾಗೇಶ ಇವರು ಎಲ್ಲಿಯವರೆಗು ಓದಿದ್ದರು ಎಂದು ನನಗೆ ಗೊತ್ತಿಲ್ಲ.

21. ನಾಗೇಶ ಬೋಟೆಯವರನ್ನು ಅವರ ತಾಯಿಯೇ ನೋಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾಗೇಶ ಮತ್ತು ವಾದಿ ಗಂಡ ಹೆಂಡತಿಯಾಗಿ ಬಾಳ್ವೆ ಮಾಡಿದ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ನಾಗೇಶ ಬೋಟೆಯವರ ತಾಯಿಯನ್ನು ನಾನು ನೋಡಿರುತ್ತೇನೆ. ವಾದಿ ಮತ್ತು ನಾಗೇಶ ಬೋಟೆಯವರ ಮದುವೆಗೆ ನಾನು ಬಂದಿದ್ದೆ, ಪದ್ದತಿ ಪ್ರಕಾರ ಸದರಿಯವರ ಮದುವೆ ಆಗಿದೆ, ಆ ಮದುವೆಯನ್ನು ನಾನು ನೋಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

22. ಪ್ರತಿವಾದಿ 1 ರಿಂದ 3 ರವರ ಜಮೀನಿನಲ್ಲಿ ಬೆಳೆದ ಕಬ್ಬು ಯಾವ ಕಾರಖಾನೆಗೆ ಕಳುಹಿಸುತ್ತಾರೆ ಎಂದು ನನಗೆ ಗೊತ್ತಿಲ್ಲ. ಮದುವ ಕಾರ್ಡನ್ನು ಮಾಹಿತಿ ಕೊಟ್ಟ ಪ್ರಕಾರ ತಯಾರ ಮಾಡುತ್ತಾರೆ ಎಂದರೆ ಸರಿ. ನಾಗೇಶ ಇವರ ತಾಯಿ ಮತ್ತು ವಾದಿಯ ಸೋದರ ಅತ್ತೆಯ ಸಂಬಂಧ ತೆಗೆದುಕೊಂಡು ವಾದಿ ಮತ್ತು ನಾಗೇಶ ಬೋಟೆಯವರ ಮದುವೆ ಆಗಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

23. ಈಗಾಗಲೇ ನಾಗೇಶ ಬೋಟೆಯವರ ತಂದೆ, ಸಂಭಾಜಿ ಬೋಟೆ ಮತ್ತು ಅವರ ಅಣ್ಣ ತಮ್ಮಂದಿರ ನಡುವೆ ನ್ಯಾಯಾಲಯದ ಡಿಕ್ರೀ ಪ್ರಕಾರ ಪಾಲು ಆಗಿದೆ ಎಂದರೆ ಸಾಕ್ಷಿದಾರರು ಸುಳ್ಳು ಡಿಕ್ರೀ ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ಸದರಿ ಡಿಕ್ರೀಯನ್ನು ನಾನು ನೋಡಿರುತ್ತೇನೆ. ನಾನು ನೋಡಿದ ಡಿಕ್ರೀ ಆಧಾರದ ಮೇಲೆ ಸದರಿ ಡಿಕ್ರೀ ಸುಳ್ಳು ಇದೆ ಎಂದು ನಾನು ಹೇಳುತ್ತೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ತಯಾರ ಮಾಡುವ ಸಮಯದಲ್ಲಿ ಕಾಗದ ಪತ್ರಗಳನ್ನು ಸವದತ್ತಿಯಲ್ಲಿ ವಾದಿಯ ಬಳಿ ಈಗ 5-6 ತಿಂಗಳ ನೋಡಿದ್ದೇನೆ. ಪ್ರತಿವಾದಿಯರು ವಾದಿಗೆ ಆಸ್ತಿ ಕೊಡುವುದಿಲ್ಲ ಎಂದು ಹೇಳಿದ್ದಕ್ಕಾಗಿ ನನಗೆ ವಾದಿಯ ಬಳಿ ಇರುವ ಕಾಗದ ಪತ್ರಗಳನ್ನು ನೋಡುವ ಪ್ರಸಂಗ ಬಂದಿರುತ್ತದೆ.

24. ವಾದಿ ಮತ್ತು 1ನೇ ಪ್ರತಿವಾದಿಯ ನಡುವೆ ಕಂದಾಯ ಕಚೇರಿಯಲ್ಲಿ ಪ್ರಕರಣ ನಡೆದ ಬಗ್ಗೆ ನನಗೆ ಮಾಹಿತಿ ಇದೆ. ನಾನು ಉತಾರ ನೋಡಿದ್ದೇನೆ. ಉತಾರ ಹೊರತುಪಡಿಸಿ ಬೇರೆ ದಾಖಲೆ ನೋಡಿಲ್ಲ. ನನಗೆ ಅಣ್ಣವ್ವ ರಾಮಪ್ಪ ಅರ್ಚನ್ನವರ, ಕಾಡಪ್ಪ ಮಲ್ಲಪ್ಪ ಬಾನಿ, ಕೆಂಪಣ್ಣಾ ಮುಶೆಪ್ಪ ಬೆನ್ನಿ ಇರುವ ಪರಿಚಯ ಇರುವುದಿಲ್ಲ. ಸದರಿಯವರು ತಳಕಟ್ನಾಳನವರು ಇರುತ್ತರೆ, ಸದರಿಯವರನ್ನು ನಾನು ವಾದಿ ಮತ್ತು ನಾಗೇಶ ಇವರ ಮದುವೆಯಲ್ಲಿ ನೋಡಿರುತ್ತೇನೆ. ಸದರಿಯವರ ಪರಿಚಯವನ್ನು ನನಗೆ ವಾದಿಯ ತಂದೆ ಮಾಡಿಕೊಟ್ಟಿರುತ್ತಾರೆ. ಈ ಮೊದಲು ವಾದಿಯ ತಂದೆಗೆ ಮತ್ತು ಸದರಿ ಮೂರು ಜನರಿಗೆ ಪರಿಚಯ ಇರಲಿಲ್ಲ.

25. ಪರಸನ್ನಾ ಶಂಕರದಿಕ್ಷಿತ ಇನಾಮದಾರ ನನ್ನ ಮಾವ. ಸದರಿ ಮೇಲೆ ಹೇಳಿದ ಅಣ್ಣವ್ವ ರಾಮಪ್ಪ ಅರ್ಚನ್ನವರ, ಕಾಡಪ್ಪ ಮಲ್ಲಪ್ಪ ಬಾನಿ, ಕೆಂಪಣ್ಣಾ ಮುಶೆಪ್ಪ ಬೆನ್ನಿ ಇವರು ಮದುವೆಗೆ ಬಂದಿದ್ದರು ಎಂದು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಯಿಸಿಲ್ಲ ಎಂದರೆ ಸರಿ. ಸದರಿ ಮೂರು ಜನ ಮದುವೆಗೆ ಬಂದಿದ್ದರು, ಹಿರಿತನ ಮಾಡಿದ ವಿಷಯ ವಾದಿಗೆ ಗೊತ್ತಿರುತ್ತದೆ.

26. ದಾವಾ ಆಸ್ತಿಗಳನ್ನು ಯಾರು ಸಾಗು ಮಾಡುತ್ತಾರೆ ಎಂದು ನನಗೆ ಅವರ ಹೆಸರು ಗೊತ್ತಿಲ್ಲ. ಆದರೆ ವಾದಿಯೇ ಎಲ್ಲ ಜಮೀನುಗಳ ಸಾಗುವಳಿಯನ್ನು ರೈತರ ಕಡೆಯಿಂದ ಮಾಡಿಸುತ್ತಾರೆ. ನಾನು ವಾದಿಗೆ ಹೊಲ ಮಾಡುತ್ತಿರುವ ರೈತರ ಹೆಸರು ಕೇಳಿಲ್ಲ. ವಾದಿ ಮತ್ತು ನಾಗೇಶ ಬೋಟೆಯವರ ಮದುವೆ ಆಗದೇ ಇದ್ದರೂ ಸಹ ದಾವಾ ಆಸ್ತಿಗಳನ್ನು ಕಬಳಿಸಬೇಕು ಎನ್ನುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ನಾಗೇಶ ಬೋಟೆ ಇವರ ಹೆಂಡತಿ ಅಲ್ಲದೇ ಇದ್ದುದ್ದರಿಂದ ಪ್ರತಿವಾದಿಯರು ಕಾನೂನು ಪ್ರಕಾರ ಡಿಕ್ರೀ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

27. ತಳಕಟ್ನಾಳ ಗ್ರಾಮದಲ್ಲಿ ವಾದಿಯನ್ನು ನಾಗೇಶ ಬೋಟೆ ಇವರ ಹೆಂಡತಿ ಎಂದು ಎಂದೂ ಕರೆದಿಲ್ಲ ಮತ್ತು ಗುರುತಿಸಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಷಯಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಶ್ರೀ.ಎಮ್.ಬಿ.ಎಚ್. ಪ್ರತಿವಾದಿ 4,5,7 ರಿಂದ 10 ರವರ ಪರ ವಕೀಲರಿಂದಃ**

ಪಾಟೀಸವಾಲು ಏನು ಇಲ್ಲ ಎಂದು ಹೇಳುತ್ತಾರೆ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ